ಓ. ಎಸ್. ನಂಃ 84/2021

**ಪಿ.ಡಬ್ಲ್ಯೂಃ 1**

**ದಿನಾಂಕಃ 18-07-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 31 ನೇ ಪ್ರತಿವಾದಿ ಪರ ಶ್ರೀ ವಿ. ವಿ. ಎಂ. ವಕೀಲರಿಂದಃ**

ನಮ್ಮ ವಾದ ಪತ್ರ ಹಾಗೂ ಪ್ರಮಾಣ ಪತ್ರದ ಖಂಡಿಕೆ-11 ರಲ್ಲಿ 4 ನೇ ವಾದಿ ಗಂಗಮ್ಮ ಅವರಿಗೆ 1 ನೇ ಪ್ರತಿವಾದಿ ಲಕ್ಷ್ಮಣ ಅವರು 2003 ರಲ್ಲಿ ದಾನ ಪತ್ರದ ಮೂಲಕ ವರ್ಗಾವಣೆ ಮಾಡಲಾಗಿದೆ, ಸದರಿ ದಾನ ಪತ್ರದ ಪ್ರಕಾರ ಸದರಿ ಆಸ್ತಿಯ ಮಾಲೀಕತ್ವವನ್ನು ಮತ್ತು ಪ್ರತ್ಯಕ್ಷ ಕಬ್ಜಾವನ್ನು ಇಟ್ಟುಕೊಂಡು ವಹಿವಾಟು ಮಾಡುತ್ತಾ ಬಂದಿರುತ್ತಾರೆ ಎಂದು ಬರೆಸಿರುವುದು ಸರಿಯಿದೆ. ಸದರಿ ದಾನಪತ್ರವನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿದ್ದೇವೆ. ಅಂತಹ ಯಾವುದೇ ದಾನಪತ್ರವನ್ನು ನಾವು ಈ ಪ್ರಕರಣದಲ್ಲಿ ಹಾಜರು ಪಡಿಸಿಲ್ಲವೆಂದರೆ ಸರಿ. ಆ ದಾನಪತ್ರವನ್ನು ನಾನು ನೋಡಿದ್ದೇನೆ. ಈ ದಾವೆಯನ್ನು ಸಲ್ಲಿಸುವಾಗ ಸದರಿ ದಾನಪತ್ರವನ್ನು ನೋಡಿದ್ದೇನೆ. ನಾನು ಹೇಳಿದಂತೆ ಗಂಗಮ್ಮಳಿಗೆ ದಾನಪತ್ರದ ಮೂಲಕ ಸದರಿ ಆಸ್ತಿ ಬಂದಿಲ್ಲ, ಈಗ ನನಗೆ ತೋರಿಸಿದ ನಿಡಿ-1 ಹಿಸ್ಸಾ ಪತ್ರದ ಪ್ರಕಾರ ಅವರ ಮಾಲ್ಕೀ ಕಬ್ಜಾ ವಹಿವಾಟಿಗೆ ಬಂದಿದೆ ಎಂದರೆ ಸರಿಯಲ್ಲ. 2003 ರಲ್ಲಿ ನಿಡಿ-1 ಹಿಸ್ಸಾ ಪತ್ರದ ಪ್ರಕಾರ ಉಳಿದ ಉತ್ತರ ಭಾಗದ 1 ಎಕರೆ 9 ಗುಂಟೆ ಜಮೀನು 1 ನೇ ಪ್ರತಿವಾದಿ ಲಕ್ಷ್ಮಣ ಅವರಿಗೆ ಉಳಿಯಿತು ಎಂದರೆ ಸರಿ. ಹೀಗೆ ಉತ್ತರ ಭಾಗದ 1 ಎಕರೆ 9 ಗುಂಟೆ ಜಮೀನು 1 ನೇ ಪ್ರತಿವಾದಿ ಲಕ್ಷ್ಮಣ ಅವರಿಗೆ ಬಂದ ಮೇಲೆ 2003 ರಿಂದ 2015 ರವರೆಗೆ ಕಂದಾಯ ದಾಖಲೆಗಳಲ್ಲಿ ಅವರ ಹೆಸರು ಮುಂದುವರೆಯಿತು ಎಂದರೆ ಸರಿ. ಈ ರೀತಿ 1 ನೇ ಪ್ರತಿವಾದಿ ಲಕ್ಷ್ಮಣ ಅವರ ಹೆಸರಿಗೆ ಸದರಿ ಆಸ್ತಿ ಬಂದ ಕಾರಣ ಅವರು ದಿಃ 02-03-2015 ರಂದು 5 ನೇ ವಾದಿ ರೂಪಾ ಅವರಿಗೆ ದಾನ ಪತ್ರದ ಮೂಲಕ ಕೊಟ್ಟರು ಎಂದರೆ ಸರಿ. ಆ ದಾನಪತ್ರವನ್ನು ನಾವು ಈ ಪ್ರಕರಣದಲ್ಲಿ ಹಾಜರು ಪಡಿಸಿಲ್ಲವೆಂದರೆ ಸರಿ.

2. ಉಳಿದ ವಾದಿಯರಾದ ಕರಬಸವ್ವ, ಗಂಗವ್ವ, ರೂಪಾ ಹಾಗೂ ಪ್ರಕಾಶ ಅವರು ನನ್ನೊಂದಿಗೆ ಚೆನ್ನಾಗಿದ್ದಾರೆ. ವಾದ ಪತ್ರದ 11 ನೇ ಖಂಡಿಕೆಯಲ್ಲಿ ನಾವು ಹೇಳಿರುವ ದಿಃ 02-03-2015 ರ ದಾನಪತ್ರ ಈಗ ನನಗೆ ತೋರಿಸಿದ ಪ್ರಮಾಣಿತ ಪ್ರತಿ ಎಂದರೆ ಸರಿ, ಸದರಿ ದಾಖಲೆಯನ್ನು **ನಿಡಿ-2** ಎಂದು ಗುರುತಿಸಲಾಯಿತು. ಸದರಿ ದಾನಪತ್ರಕ್ಕೆ ನನ್ನ ಸಹೋದರಿ ಕರಬಸವ್ವ ಮತ್ತು ನನ್ನ ಚಿಕ್ಕಮ್ಮಳಾದ ಗಂಗಮ್ಮ ಸಹಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಆ ದಾನಪತ್ರದ ಪ್ರಕಾರ ರೂಪಾ ಅವರು ಆಸ್ತಿಯ ಕಬ್ಜಾ ವಹಿವಾಟಿಗೆ ಬಂದರು ಎಂದು ನಾವು ಹೇಳಿದ್ದೇವೆ ಎಂದರೆ ಸರಿ.

**ಪಿ.ಡಬ್ಲ್ಯೂಃ 1**

3. ಈಗ ನನಗೆ ತೋರಿಸಿದ ನಿಡಿ-1 ದಾಖಲೆಯ ಪ್ರಕಾರ 2003 ರಲ್ಲಿ ನನ್ನ ಅಜ್ಜ ವೀರಪ್ಪ ಮತ್ತು ಅವರ ಮಕ್ಕಳ ನಡುವಿನ ಸಾಮೂಹಿಕ ಕಬ್ಜೆ ತಪ್ಪಿ ಹೋಯಿತು ಎಂದರೆ ಸರಿಯಲ್ಲ. 2003 ರಲ್ಲಿ ಮೇಲೆ ಹೇಳಿದಂತೆ ನಮ್ಮ ಸಾಮೂಹಿಕ ಕಬ್ಜೆ ತಪ್ಪಿ ಹೋದ ಮೇಲೆ ನಾವು 12 ವರ್ಷಗಳ ಒಳಗೆ ಯಾವುದೇ ಕ್ರಮ ಜರುಗಿಸಿಲ್ಲವೆಂದರೆ ಸರಿಯಲ್ಲ. ನಿಡಿ-1 ಹಿಸ್ಸೆ ಪತ್ರದ ಪ್ರಕಾರ ನಾವು ಭಾಗ ಮಾಡಿಕೊಂಡಿರುವುದರಿಂದ ಮತ್ತು ನಾವು ಅದರಂತೆ ನಡೆದುಕೊಂಡಿರುವುದರಿಂದ ಸಾಮೂಹಿಕ ಕಬ್ಜೆ ತಪ್ಪಿ ಹೋಗಿದ್ದರಿಂದ ನಾವು ಈಗ ಸಾಮೂಹಿಕ ಕಬ್ಜೆಯಲ್ಲಿ ಇಲ್ಲವೆಂದರೆ ಸರಿಯಲ್ಲ. ಮೇಲೆ ಹೇಳಿದಂತೆ ನಿಡಿ-1 ರ ಪ್ರಕಾರ ನಮ್ಮ ಎಲ್ಲರ ಸಾಮೂಹಿಕ ಕಬ್ಜೆ ತಪ್ಪಿ ಹೋಗಿದ್ದರು ಸಹಿತ ನಾವು ಸಾಮೂಹಿಕ ಕಬ್ಜೆಯಲ್ಲಿ ಇದ್ದೇವೆಂದು ಸುಳ್ಳು ಹೇಳಿದ್ದೇವೆಂದರೆ ಸರಿಯಲ್ಲ.

4. ನನ್ನ ತಾಯಿಯ ತಂದೆಯ ಹೆಸರು ವೀರಪ್ಪ ಆತನ ಹೆಂಡತಿಯ ಹೆಸರು ಈರಮ್ಮ ಎಂದರೆ ಸರಿ. ನಮ್ಮ ಅಜ್ಜಿ ಈರಮ್ಮಳ ಅಣ್ಣ ವೀರಪ್ಪ ಬೇವಿನಹಳ್ಳಿ. ಸದರಿ ವೀರಪ್ಪ ಬೇವಿನಹಳ್ಳಿ ಅವರ ಮಕ್ಕಳು ಈ ದಾವೆಯ 4 ನೇ ಪ್ರತಿವಾದಿ ಬಸವರಾಜ ಹಾಗೂ 28 ನೇ ಪ್ರತಿವಾದಿ ಚಂದ್ರಪ್ಪ ಎಂದರೆ ಸರಿ. 5 ರಿಂದ 7 ನೇ ಪ್ರತಿವಾದಿಗಳಾದ ವೀಣಾ, ಸುಸ್ಮಿತಾ ಹಾಗೂ ಪರಶುರಾಮ ಅವರು 4 ನೇ ಪ್ರತಿವಾದಿ ಬಸವರಾಜಪ್ಪನ ಮಕ್ಕಳು. ಆದ್ದರಿಂದ 4 ಮತ್ತು 5 ನೇ ವಾದಿಗಳಾದ ಗಂಗಮ್ಮ ಹಾಗೂ ರೂಪಾ ಅವರು ನಮ್ಮ ತಾಯಿಯ ತಂಗಿಯರು ಎಂದರೆ ಸರಿ. 1 ನೇ ಪ್ರತಿವಾದಿ ಲಕ್ಷ್ಮಣ ನನ್ನ ತಾಯಿಯ ಸ್ವಂತ ತಮ್ಮ. ನನ್ನ ಅಜ್ಜಿ ಈರಮ್ಮ ಅವರು ಬೇವಿನಹಳ್ಳಿ ವೀರಪ್ಪ ಅವರ ತಂಗಿ ಎಂದರೆ ಸರಿ. ಹೀಗಾಗಿ 4 ನೇ ಪ್ರತಿವಾದಿ ಬಸವರಾಜ ಹಾಗೂ 28 ನೇ ಪ್ರತಿವಾದಿ ಚಂದ್ರಪ್ಪ ಅವರು ನನ್ನ ತಾಯಿಯ ಸೋದರ ಮಾವನ ಮಕ್ಕಳೆಂದರೆ ಸರಿ.

5. ಈ ಪ್ರಕರಣದ 4 ರಿಂದ 7 ಹಾಗೂ 28 ನೇ ಪ್ರತಿವಾದಿಗಳು ನನ್ನೊಂದಿಗೆ ಈ ದಾವೆ ಮಾಡಿದಾಗಿನಿಂದ ಸರಿಯಾಗಿಲ್ಲ. ಈ ಪ್ರಕರಣದ 4 ರಿಂದ 7 ಹಾಗೂ 28 ನೇ ಪ್ರತಿವಾದಿಗಳು ಮಾವಿನತೋಪಿನಲ್ಲಿ ಇರುತ್ತಾರೆ ಎಂದರೆ ಸುಳ್ಳು. ಪ್ರತಿವಾದಿಯರ ವಿಳಾಸಗಳನ್ನು ನಾವೇ ಕೊಟ್ಟಿದ್ದೇವೆ ಎಂದರೆ ಸರಿ. 4 ರಿಂದ 7 ಹಾಗೂ 28 ನೇ ಪ್ರತಿವಾದಿಗಳು ಮಾವಿನತೋಪಿನಲ್ಲಿ ಇದ್ದರು ಸಹ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ದಿಃ 05-08-2011 ರಂದು 1 ನೇ ಪ್ರತಿವಾದಿ ಲಕ್ಷ್ಮಣ ಅವರು ಸರ್ವೆ ನಂಃ 49/3 ರಲ್ಲಿ 5 ಎಕರೆ 37 ಗುಂಟೆ ಪೈಕಿ 3 ಎಕರೆ 1 ಗುಂಟೆ ಜಮೀನನ್ನು 28 ನೇ ಪ್ರತಿವಾದಿ ಚಂದ್ರಪ್ಪ ಅವರಿಗೆ ಖರೀದಿ ಕೊಟ್ಟಿದ್ದಾರೆಂದು ನಾವು ವಾದ ಪತ್ರದಲ್ಲಿ ಬರೆಸಿದ್ದೇವೆಂದರೆ ನನಗೆ ಗೊತ್ತಿಲ್ಲ,

ನಾನು ಊರಿನಲ್ಲಿ ಇರಲಿಲ್ಲ. ಇದುವರೆಗೂ ನಾನು ಆ ಖರೀದಿ ವ್ಯವಹಾರದ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ. ಆ ಖರೀದಿ ವ್ಯವಹಾರವನ್ನು ಆಧರಿಸಿ ನೀವು ಈ ಮೊದಲು ಯಾರಿಗೂ ಮಾಹಿತಿ ಕೊಟ್ಟಿರುವಿರಾ ಎಂದು ಕೇಳಿದ್ದಕ್ಕೆ ಸಾಕ್ಷಿ ಗೊತ್ತಿಲ್ಲವೆಂದು ಉತ್ತರಿಸಿದ್ದಾರೆ. ಸದರಿ ಖರೀದಿ ವ್ಯವಹಾರದ ಆಧಾರದಿಂದ ಚಂದ್ರಪ್ಪನು ಏನು ವ್ಯವಹಾರ ಮಾಡಿದ್ದಾನೆಂದು ನನಗೆ ಮಾಹಿತಿ ಇಲ್ಲ. ನಾವು ವಾದ ಪತ್ರದಲ್ಲಿ ಮತ್ತು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವ 2016ರ ಖರೀದಿ ಪತ್ರವನ್ನು ನಾನು ನೋಡಿಲ್ಲ.

7. ಸರ್ವೆ ನಂಃ 49/3 ರಲ್ಲಿ 5 ಎಕರೆ 37 ಗುಂಟೆ ಪೈಕಿ 3 ಎಕರೆ 1 ಗುಂಟೆ ಜಮೀನನ್ನು 28 ನೇ ಪ್ರತಿವಾದಿ ಚಂದ್ರಪ್ಪ ಅವರಿಗೆ ಖರೀದಿ ಕೊಟ್ಟ ನಂತರ ಬಾಕಿ ಉಳಿದ 2 ಎಕರೆ 36 ಗುಂಟೆ ಜಮೀನನ್ನು 4, 9, 13, 16, 19 ರಿಂದ 22, 26, 28 ಹಾಗೂ 29 ನೇ ಪ್ರತಿವಾದಿಗಳಿಗೆ ಲಕ್ಷ್ಮಣ ಖರೀದಿಗೆ ಕೊಟ್ಟಿದ್ದಾನೆಂದು ನಾವು ವಾದ ಪತ್ರದಲ್ಲಿ ಬರೆಸಿದ್ದೇವೆಂದರೆ ಗೊತ್ತಿಲ್ಲ. ಆಗ ನಾನು ಊರಲ್ಲಿ ಇರಲಿಲ್ಲ. ಆ ಬಗ್ಗೆ ನಾನು ಖರೀದಿ ಪತ್ರಗಳನ್ನು ನೋಡಿಲ್ಲ. ಈ ಎಲ್ಲಾ ಆಸ್ತಿಗಳು ಲಕ್ಷ್ಮಣ ಅವರಿಗೆ 2003 ರಲ್ಲಿ ಬಂದ ನಂತರ ಮೇಲೆ ಹೇಳಿದ ಪ್ರತಿವಾದಿಗಳಿಗೆ ಖರೀದಿಗೆ ಕೊಟ್ಟಿದ್ದಾರೆಂದರೆ ನನಗೆ ಗೊತ್ತಿಲ್ಲದಂತೆ ಕೊಟ್ಟಿದ್ದಾರೆ. ಮೇಲೆ ಹೇಳಿದಂತೆ ಖರೀದಿಗೆ ತೆಗೆದುಕೊಂಡ ನಂತರ ಸದರಿ ಪ್ರತಿವಾದಿಗಳ ಹೆಸರುಗಳು ಆಸ್ತಿಯ ದಾಖಲೆಗಳಲ್ಲಿ ಬಂದಿವೆ ಎಂದರೆ ಸರಿ.

8. ಈ ದಾವೆಯ 8 ರಿಂದ 26 ನೇ ಪ್ರತಿವಾದಿಗಳು ಸರ್ವೆ ನಂಃ 49/3 ರಲ್ಲಿ ತುಂಡು ತುಂಡು ಭೂಮಿಗಳನ್ನು ಖರೀದಿ ಮಾಡಿದ್ದಾರೆಂದರೆ ಸರಿ. ಅವರೆಲ್ಲರೂ ಮಾವಿನತೋಪು ಗ್ರಾಮದವರು ಎಂದರೆ ಸರಿ. ಅವರು ಅವುಗಳನ್ನು ನಿವೇಶನಗಳನ್ನಾಗಿ ಉಪಯೋಗಿಸಿಕೊಳ್ಳುವ ಉದ್ದೇಶದಿಂದ ತುಂಡು ತುಂಡು ಭೂಮಿಗಳನ್ನು ಖರೀದಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳಲ್ಲಿ ಬಹುತೇಕ ಪ್ರತಿವಾದಿಗಳು ಮನೆಗಳನ್ನು ಕಟ್ಟಿಕೊಂಡಿದ್ದಾರೆಂದರೆ ಸರಿ. ನಂತರ ಸಾಕ್ಷಿ ಒಂದೇ ಮನೆ ಇದೆ ಎಂದು ಹೇಳಿದ್ದಾರೆ.

9. ಈ ದಾವೆಯಲ್ಲಿ 4 ರಿಂದ 7 ಹಾಗೂ 28 ನೇ ಪ್ರತಿವಾದಿಗಳು ಲಿಖಿತ ಹೇಳಿಕೆ ಸಲ್ಲಿಸಿಲ್ಲವೆಂದರೆ ಸರಿ. ಅದೇ ರೀತಿ 8 ರಿಂದ 26 ನೇ ಪ್ರತಿವಾದಿಗಳು ಸಹ ಲಿಖಿತ ಹೇಳಿಕೆ ಸಲ್ಲಿಸಿಲ್ಲವೆಂದರೆ ಸರಿ.

10. ಮಾವಿನತೋಪು ಗ್ರಾಮದಲ್ಲಿ ನಮ್ಮ ಮನೆ ಮತ್ತು ಲಕ್ಷ್ಮಣ ಅವರ ಮನೆ ಸುಮಾರು 70 ಮೀಟರ ದೂರದಲ್ಲಿದ್ದವು, ಈಗ 20 ವರ್ಷಗಳಿಂದ ಅವರು ಬೇರೆ ಮನೆ ಮಾಡಿದ್ದಾರೆ. ಆ ಮನೆಯು 27 ಜನ ಖರೀದಿಸಿರುವ ಆಸ್ತಿಗಳ ಪಕ್ಕದಲ್ಲಿದೆ. ನಮ್ಮ ತಾಯಿ ಜೀವಂತವಿದ್ದಾಗ ಲಕ್ಷ್ಮಣ ಅವರನ್ನು ಮನೆಗೆ ಕರೆಸುತ್ತಿದ್ದರು ಮತ್ತು ಅವರು ಬಂದು ಹೋಗುತ್ತಿದ್ದರು ಎಂದರೆ ಸರಿಯಲ್ಲ.

ಓ. ಎಸ್. ನಂಃ 84/2021

**ಪಿ.ಡಬ್ಲ್ಯೂಃ 1**

11. 2003 ನೇ ಇಸವಿಯಲ್ಲಿ ಹಿಸ್ಸೆ ಆಗುವ ಕಾಲದಲ್ಲಿ, 2011 ರಲ್ಲಿ 28 ನೇ ಪ್ರತಿವಾದಿಗೆ ಖರೀದಿ ಕೊಡುವ ಕಾಲಕ್ಕೆ, 2015 ರಲ್ಲಿ 5 ನೇ ವಾದಿಗೆ ದಾನ ಕೊಡುವ ಕಾಲಕ್ಕೆ ಹಾಗೂ ಮೇಲೆ ಹೇಳಿದಂತೆ ಬೇರೆ ಬೇರೆ ಪ್ರತಿವಾದಿಗಳಿಗೆ ನಿವೇಶನಗಳನ್ನು ಖರೀದಿಗೆ ಕೊಡುವ ಕಾಲಕ್ಕೆ ನಾವು ಯಾವುದೇ ತಕರಾರು ಮಾಡಿಲ್ಲವೆಂದರೆ, ನಮಗೆ ಗೊತ್ತಿಲ್ಲದಂತೆ ಮಾಡಿದ್ದಾರೆ. 2011 ರಲ್ಲಿ 28 ನೇ ಪ್ರತಿವಾದಿಗೆ 3 ಎಕರೆ 1 ಗುಂಟೆ ಜಮೀನನ್ನು ಖರೀದಿಗೆ ಕೊಟ್ಟ ನಂತರ, ಮೇಲೆ ಹೇಳಿದ ಪ್ರತಿವಾದಿಗಳು ನಿವೇಶನಗಳನ್ನು ಖರೀದಿಸಿದ ನಂತರ ಅವರೆಲ್ಲರೂ ಅವರವರ ಆಸ್ತಿಗಳಲ್ಲಿ ಮಾಲ್ಕೀ ಕಬ್ಜಾ ವಹಿವಾಟಿಗೆ ಬಂದಿದ್ದಾರೆಂದರೆ ಗೊತ್ತಿಲ್ಲ. ಆ ರೀತಿ ಬಂದಿದ್ದರು ಸಹ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. ದಾವಾಸ್ತಿಗಳ ಕಬ್ಜೆ ಬಗ್ಗೆ ನಾವು ವಕೀಲರಿಗೆ ಮಾಹಿತಿ ಕೊಟ್ಟಿಲ್ಲ, ಆದರೆ ದಾಖಲೆಗಳನ್ನು ಕೊಟ್ಟಿದ್ದೇವೆ. ಈ ಎಲ್ಲಾ ಆಸ್ತಿಗಳು ಸಾಮೂಹಿಕ ಕಬ್ಜಾ ವಹಿವಾಟಿಯಲ್ಲಿ ಇಲ್ಲದಿದ್ದರೂ ಸಹ ಸಾಮೂಹಿಕ ಕಬ್ಜಾ ವಹಿವಾಟಿಯಲ್ಲಿ ಇವೆ ಎಂದು ಸುಳ್ಳು ಬರೆಸಿದ್ದೇವೆಂದರೆ ಸರಿಯಲ್ಲ.

13. ಈ ದಾವೆಯಲ್ಲಿನ ಪ್ರತಿವಾದಿಗಳಾದ ಡಾ.ಮೋಹನಕುಮಾರ ಮತ್ತು ರಂಗನಾಥ ಅವರು ನಮ್ಮ ಸಂಬಂಧಿಕರಲ್ಲ.

14. ನಮ್ಮ ಅಜ್ಜ ವೀರಪ್ಪನ ಹೆಸರಿನಲ್ಲಿ ಈಗ ನನಗೆ ಓದಿ ಹೇಳಿದಂತೆ 31 ನೇ ಪ್ರತಿವಾದಿ ಸಲ್ಲಿಸಿರುವ 3 ನೇ ಪುಟದ ಕೊನೆಯಲ್ಲಿ ಹೇಳಿರುವ ಆಸ್ತಿಗಳು ಇದ್ದವು ಎಂದರೆ ಸರಿ. ಸದರಿ ಆಸ್ತಿಗಳಲ್ಲಿ ನಮ್ಮ ಅಜ್ಜ ಸರ್ವೇ ನಂಃ 48/1ಬ+4+5+5ಅ/1 ರಲ್ಲಿ 4 ಎಕರೆ 6 ಗುಂಟೆ ಹಾಗೂ ಸರ್ವೇ ನಂಃ 48/1ಬ+4+5+5ಅ/2 ರಲ್ಲಿ 4 ಎಕರೆ 5 ಗುಂಟೆ ಆಸ್ತಿಗಳನ್ನು ಉಜ್ಜಪ್ಪ ಶಿವಪ್ಪ ಮಾಗನೂರು ಅವರಿಗೆ ಮಾರಾಟ ಮಾಡಿದ್ದಾನೆಂದರೆ ಸರಿ.

15. ಅದೇ ರೀತಿ ನಮ್ಮ ಅಜ್ಜ ವೀರಪ್ಪನು ಮಾವಿನತೋಪು ಗ್ರಾಮದ ಸರ್ವೇ ನಂಃ 49/1ರಲ್ಲಿ 8 ಎಕರೆ 36 ಗುಂಟೆ ಪೈಕಿ 1 ಎಕರೆ 18 ಗುಂಟೆ ಜಮೀನನ್ನು ಬಣಕಾರ ಕರಿಬಸಪ್ಪ ಶಿವಪ್ಪ ಅವರಿಗೆ ಮಾರಾಟ ಮಾಡಿದ್ದಾನೆಂದರೆ ಸರಿ, ಒಟ್ಟು ಕುಟುಂಬದಲ್ಲಿದ್ದಾಗ ಮಾರಿದ್ದಾರೆ.

**ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮಧ್ಯಾಹ್ನ 3-00 ಗಂಟೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೆ. ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ18-07-2026

Sd/-

ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್.ಸಿ,

ಹಿರೇಕೆರೂರು

ಓ. ಎಸ್. ನಂಃ 84/2021

**ಪಿ.ಡಬ್ಲ್ಯೂಃ 1**

**ದಿನಾಂಕಃ 18-07-2026 ರಂದು ಸಾಕ್ಷಿಯನ್ನು ಪುನಃ 3-15 ಗಂಟೆಗೆ ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 31 ನೇ ಪ್ರತಿವಾದಿ ಪರ ಶ್ರೀ ವಿ. ವಿ. ಎಂ. ವಕೀಲರಿಂದಃ**

ಸರ್ವೇ ನಂಃ 49/1 ರಲ್ಲಿ ಉಳಿದ ಕ್ಷೇತ್ರದ ಪೈಕಿ 12 ಗುಂಟೆ ಜಮೀನನ್ನು ನಮ್ಮ ಅಜ್ಜ ವೀರಪ್ಪನು ತಾವರಗಿ ಪಕ್ಕೀರಪ್ಪ ತಂದೆ ಬರಮಪ್ಪ ಅವರಿಗೆ ಮಾರಾಟ ಮಾಡಿದ್ದಾನೆಂದರೆ ಸರಿ. ಮಾವಿನತೋಪು ಗ್ರಾಮದ ಸರ್ವೇ ನಂಃ 53/1, 54/2 ಹಾಗೂ 55/1 ರಲ್ಲಿ ನಮ್ಮ ಅಜ್ಜ ಬೇರೆ ಬೇರೆಯವರಿಗೆ ಜಮೀನುಗಳನ್ನು ಮಾರಿದ್ದಾರೆಂದರೆ ಸರಿ, ಕೂಡಿ ಇದ್ದಾಗ ಮಾರಿದ್ದಾರೆ.

2. ಬಡಸಂಗಾಪುರ ಗ್ರಾಮದ ಸರ್ವೇ ನಂಃ 55/2, 54/1, 55/2 ಹಾಗೂ 55/3 ರಲ್ಲಿಯ ಆಸ್ತಿಗಳನ್ನು ನಮ್ಮ ಅಜ್ಜ ಬೇರೆ ಬೇರೆಯವರಿಗೆ ಜಮೀನುಗಳನ್ನು ಮಾರಿದ್ದಾರೆಂದರೆ ಸರಿ, ಕೂಡಿ ಇದ್ದಾಗ ಮಾರಿದ್ದಾರೆ. ನಾವು ಬೇರೆ ಬೇರೆಯಾಗಿ 18-20 ವರ್ಷಗಳಾದವು. ವೀರಪ್ಪ ಮತ್ತು ಆತನ ಕುಟುಂಬದವರಿಗೆ ಮೊದಲಿನಿಂದಲೂ ಕುಟುಂಬದ ಅಡಚಣೆ ಇತ್ತು, ಆದ್ದರಿಂದ ಅವರು ಆಸ್ತಿಗಳನ್ನು ಮಾರುತ್ತಾ ಬಂದರೆಂದರೆ ಸರಿ.

3. ಲಕ್ಷ್ಮಪ್ಪ ಮತ್ತು ಆತನ ಮಕ್ಕಳು ಬಡಸಂಗಾಪುರ ಗ್ರಾಮದ ಸರ್ವೇ ನಂಃ55/1+2+3, ಸರ್ವೇ ನಂಃ 49 ರಲ್ಲಿ 36 ಗುಂಟೆ ಆಸ್ತಿಗಳನ್ನು ಮಾರಾಟ ಮಾಡಲು ಹೊರಟಿದ್ದಾರೆಂದು ನಮಗೆ ತಿಳಿದುಬಂದಿದ್ದರಿಂದ ಸದರಿ ಆಸ್ತಿಗಳನ್ನು ಪರಬಾರೆ ಮಾಡಬಾರದೆಂದು ನಾವು ಮಧ್ಯಂತರ ಅರ್ಜಿ ಸಲ್ಲಿಸಿದ್ದೇವು. ಯಾರಿಗೆ ಮಾರಾಟ ಮಾಡಲು ಹೊರಟಿದ್ದಾರೆಂದುನಮಗೆ ಗೊತ್ತಿರಲಿಲ್ಲ, ಆದರೆ ಮಾರಾಟ ಮಾಡಲು ಹೊರಟಿದ್ದರು ಎಂದು ಗೊತ್ತು. ಪೋಲಿಸ್ ಠಾಣೆಯಲ್ಲಿ ಆಸ್ತಿ ಮಾರಾಟ ಮಾಡುವುದಾಗಿ ಹೇಳಿದ್ದರಿಂದ ಗೊತ್ತಾಯಿತು. ಯಾರಿಗೆ ಎಂದು ಹೇಳಿಲ್ಲ.

4. ಈ ದಾವೆಯನ್ನು ಸಲ್ಲಿಸುವಾಗ 31 ನೇ ಪ್ರತಿವಾದಿ ಚನ್ನಬಸನಗೌಡ ತಂದೆ ಚನ್ನಗೌಡ ದ್ಯಾವನಗೌಡ್ರ ಅವರಿಗೆ ಆಸ್ತಿ ಮಾರಾಟ ಮಾಡುತ್ತಿರುವ ವಿಷಯ ನಮಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಈ ವಿಷಯ ಗೊತ್ತಿದ್ದರು ಸಹ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರಲಿಲ್ಲವೆಂದರೆ ದಾವೆ ಸಲ್ಲಿಸಿ 15 ದಿನಗಳ ನಂತರ ಆಸ್ತಿ ಖರೀದಿ ಮಾಡಿದ್ದಾರೆ. ಆಸ್ತಿಗಳನ್ನು ಪರಭಾರೆ ಮಾಡಬಾರದೆಂದು ಈ ದಾವೆಯಲ್ಲಿ ಆದೇಶವಾದ ಮೇಲೆ ಅದನ್ನು ಕಂದಾಯ

ದಾಖಲೆಗಳಲ್ಲಿ ಶೀಘ್ರವಾಗಿ ನಮೂದಿಸುವಂತೆ ಕೇಳಿಕೊಳ್ಳಲು ನಮಗೆ ತೊಂದರೆ ಇತ್ತು. ನಮಗೆ ಯಾವುದೇ ತೊಂದರೆ ಇಲ್ಲದಿದ್ದರು ಸಹ ಇತ್ತೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ 1 ರಿಂದ 3 ನೇ ಪ್ರತಿವಾದಿಗಳು ಲಿಖಿತ ಹೇಳಿಕೆ ಸಲ್ಲಿಸಿಲ್ಲವೆಂದರೆ ಸರಿ. 1 ರಿಂದ 3 ನೇ ಪ್ರತಿವಾದಿಗಳು ಈ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿದ್ದಾರೆಂದು ನಾವು ಅವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲವೆಂದರೆ ಸರಿ.

5. ತನ್ನ ತಂದೆಯಾದ ವೀರಪ್ಪನು ಮಾಡಿ ಬಿಟ್ಟು ಹೋಗಿದ್ದ ಸಾಲ ತೀರಿಸಲು ಮತ್ತು ತನ್ನ ಮನೆತನದ ಅಡಚಣೆಗಾಗಿ 1 ನೇ ಪ್ರತಿವಾದಿ ಲಕ್ಷ್ಮಣ, ಆತನ ಹೆಂಡತಿ ಮತ್ತು ಮಗಳು ದಿಃ 25-11-2021 ರಂದು 1 ನೇ ದಾವಾಸ್ತಿ ಸರ್ವೇ ನಂಃ 55/1+2+3 ರಲ್ಲಿ 7 ಎಕರೆ 28 ಗುಂಟೆ ಜಮೀನನ್ನು 31 ನೇ ಪ್ರತಿವಾದಿ ಚನ್ನಬಸನಗೌಡ ತಂದೆ ಚನ್ನಗೌಡ ದ್ಯಾವನಗೌಡ್ರ ಅವರಿಗೆ ಮಾರಾಟ ಮಾಡಿದ್ದಾರೆಂದರೆ ಯಾವುದೇ ಅಡಚಣೆ ಇರಲಿಲ್ಲ. ಆ ಬಗ್ಗೆ ಖರೀದಿ ಪತ್ರ ನೋಂದಣಿ ಆಗಿದೆ ಎಂದರೆ ಸರಿ. ಆ ರೀತಿ ಆದ ಖರೀದಿ ಪತ್ರದ ಪ್ರಕಾರ 31 ನೇ ಪ್ರತಿವಾದಿ ಚನ್ನಬಸನಗೌಡ ತಂದೆ ಚನ್ನಗೌಡ ದ್ಯಾವನಗೌಡ್ರ ಅವರ ಹೆಸರು ಕಂದಾಯ ದಾಖಲೆಗಳಲ್ಲಿ ಮಾಲೀಕ ಮತ್ತು ಕಬ್ಜಾದಾರನ ಅಂಕಣಗಳಲ್ಲಿ ಬಂದಿದೆ ಎಂದರೆ ತಪ್ಪು. 1 ರಿಂದ 3 ನೇ ಪ್ರತಿವಾದಿಗಳ ಮಾಲೀಕತ್ವ ಮತ್ತು ಕಬ್ಜೆ ಹಕ್ಕುಗಳನ್ನು ಹಾಗೂ ಅವರ ಕುಟುಂಬದ ಹಣದ ಅವಶ್ಯಕತೆಗಳನ್ನು ವಿಚಾರಿಸಿ ಖಚಿತಪಡಿಸಿಕೊಂಡು 31 ನೇ ಪ್ರತಿವಾದಿ ಚನ್ನಬಸನಗೌಡ ತಂದೆ ಚನ್ನಗೌಡ ದ್ಯಾವನಗೌಡ್ರ ಅವರು ಸದರಿ ಆಸ್ತಿಯನ್ನು ಖರೀದಿಸಿದ್ದಾರೆಂದರೆ ತಪ್ಪು. ಆ ರೀತಿ ಖರೀದಿಸಿದ ಮೇಲೆ ಆ ಜಮೀನಿನಲ್ಲಿ 3-4 ಕೊಳವೆ ಬಾವಿಗಳನ್ನು ಕೊರೆಸಿ, ಜಮೀನು ಅಭಿವೃದ್ಧಿ ಮಾಡಿ, ಅಡಿಕೆ ತೋಟವನ್ನು ಮಾಡಿಕೊಂಡು ಸಾಗುವಳಿ ಮಾಡುತ್ತಿದ್ದಾನೆ ಎಂದರೆ ನ್ಯಾಯಾಲಯದ ಆದೇಶವಿದ್ದರು ಆ ರೀತಿ ಮಾಡುತ್ತಿದ್ದಾರೆ.

6. ಈ ಪ್ರಕರಣದಲ್ಲಿ 1 ನೇ ಮಧ್ಯಂತರ ಅರ್ಜಿಯ ಮೇಲಿನ ಆದೇಶವು ದಿಃ 15-11-2021 ರಂದು ಆಗಿದೆ ಎಂದರೆ ಸರಿ. ನಾವು ದಿಃ 05-12-2022 ರವರೆಗೆ ಸದರಿ ಆದೇಶದ ಪ್ರತಿಯನ್ನು ಪಡೆಯಲು ಈ ನ್ಯಾಯಾಲಯದಲ್ಲಿ ಅರ್ಜಿಯನ್ನು ಹಾಕಿಲ್ಲವೆಂದರೆ ಸರಿ. 1 ರಿಂದ 3 ನೇ ಪ್ರತಿವಾದಿಗಳು ಮತ್ತು ನಾವು ಶಾಮೀಲಾಗಿ ಈ ನ್ಯಾಯಾಲಯದಿಂದ ಮೇಲೆ ಹೇಳಿದಂತೆ

ತೋರಿಕೆಯ ಆದೇಶವನ್ನು ಪಡೆದುಕೊಂಡು, ಅದನ್ನು 31 ನೇ ಪ್ರತಿವಾದಿಗೆ ತಿಳಿಸದಂತೆ, 1 ರಿಂದ 3 ನೇ ಪ್ರತಿವಾದಿಗಳು ಸದರಿ ಜಮೀನನ್ನು 31 ನೇ ಪ್ರತಿವಾದಿ ಚನ್ನಬಸನಗೌಡ ತಂದೆ ಚನ್ನಗೌಡ ದ್ಯಾವನಗೌಡ್ರ ಅವರಿಗೆ ಖರೀದಿಗೆ ಕೊಟ್ಟಿದ್ದಾರೆ, ಈ ವಿಷಯ ನಮಗೆ ಗೊತ್ತು ಎಂದರೆ ಸರಿಯಲ್ಲ. ಈ ವಿಷಯದ ಕುರಿತು 4 ರಿಂದ 7 ಹಾಗೂ 28 ನೇ ಪ್ರತಿವಾದಿಗಳು ಸಹ ನಮಗೆ ಸಹಕರಿಸಿದ್ದಾರೆಂದರೆ ಸರಿಯಲ್ಲ. ನಾವು ಹೇಗಾದರು ಮಾಡಿ 31 ನೇ ಪ್ರತಿವಾದಿ ಚನ್ನಬಸನಗೌಡ ತಂದೆ ಚನ್ನಗೌಡ ದ್ಯಾವನಗೌಡ್ರ ಅವರಿಂದ ಸದರಿ ಆಸ್ತಿಯನ್ನು ಪಡೆದುಕೊಳ್ಳಬೇಕೆಂದೆ ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ವಾದ ಪತ್ರದಲ್ಲಿ ಈ ದಾವೆಯ ಆಸ್ತಿಗಳು 4 ತಲೆಮಾರಿನಿಂದ ಬಂದ ಆಸ್ತಿಗಳೆಂದು ತೋರಿಸಲು ನಾವು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲವೆಂದರೆ ಗೊತ್ತಿಲ್ಲ. ಈ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಸಾಮೂಹಿಕ ಆಸ್ತಿಗಳೆಂದು ತೋರಿಸಲು ಸಹ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ.

7. ನಾವು 2003 ರಲ್ಲಿ ಆದ ಹಿಸ್ಸೆಯನ್ನು ರದ್ದು ಪಡಿಸುವಂತೆ ಈ ಪ್ರಕರಣದಲ್ಲಿ ಕೇಳಿಲ್ಲವೆಂದರೆ ಸರಿಯಲ್ಲ. ನಮ್ಮ ಅಜ್ಜ ಮಾರಾಟ ಮಾಡಿದ ಆಸ್ತಿಗಳನ್ನು ನಾವು ಈ ದಾವೆಯಲ್ಲಿ ಸೇರಿಸಿಲ್ಲವೆಂದರೆ ಸರಿಯಲ್ಲ.

8. ವೀರಪ್ಪನು ತನ್ನ ಜೀವಿತಾವಧಿಯಲ್ಲಿ ತನ್ನ ಮಕ್ಕಳೊಂದಿಗೆ ಭಾಗ ಮಾಡಿಕೊಂಡಿರುವುದರಿಂದ ಮತ್ತು 2005 ರ ಪೂರ್ವದಲ್ಲಿ ಹಿಸ್ಸೆಯಾಗಿದ್ದು, ಅದು ಸಾರ್ವಜನಿಕ ದಾಖಲೆಗಳಲ್ಲಿ ನಮೂದಾಗಿರುವುದರಿಂದ ನಾವು ದಾವೆಯಲ್ಲಿ ಕೇಳಿದ ಯಾವುದೇ ಪರಿಹಾರಗಳನ್ನು ಪಡೆಯಲು ಅರ್ಹರಲ್ಲವೆಂದರೆ ಸರಿಯಲ್ಲ.

**<u>ಮರು ವಿಚಾರಣೆಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ. ಹೆ. ಕೆ. ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ18-07-2026

Sd/-

ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್.ಸಿ,

ಹಿರೇಕೆರೂರು